# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 199 |
| ಉತ್ತರಿಸುವ ದಿನಾಂಕ | 14-02-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆ. ಕೋಲಾರ ತಾಲ್ಲೂಕು, ಪೇಟೆ ಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 28/1ರಲ್ಲಿ 15 ಗುಂಟೆ ಜಮೀನು ಭೂ ಪರಿವರ್ತನೆಗೊಂಡು, ಒಬ್ಬರ ಹೆಸರಿಗೆ ದಿನಾಂಕ: 26.06.1988ರಲ್ಲಿ (ಕ್ರಯ ಪತ್ರದ ಸಂಖ್ಯೆ:2626/87-88) ಮಾರಾಟವಾಗಿ, ಖಾತೆ, ಕಂದಾಯಗಳನ್ನು ಕಾಲಕಾಲಕ್ಕೆ ಪಾವತಿಸಿಕೊಂಡು ಬರುತ್ತಿದ್ದರೂ ಸಹ ಸದರಿ ಜಮೀನನ್ನು ದಿನಾಂಕ: 28.10.2019ರಲ್ಲಿ ಅಕ್ರಮವಾಗಿ ಬೇರೊಬ್ಬರ ಹೆಸರಿಗೆ ಕ್ರಯ ಪತ್ರದ ಸಂಖ್ಯೆ: KLR/1/05020/2019-20 ಹಾಗೂ ಇ-ಸ್ವತ್ತಿನ ಸಂಖ್ಯೆ: 151900701201021044 ರೀತ್ಯಾ ನಕಲಿ ದಾಖಲೆ ಸೃಷ್ಟಿಸಿ, ಕ್ರಯ ಪತ್ರದ ಕರಾರನ್ನು ನೋಂದಣಿ ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ: 24.10.2019 ರಲ್ಲಿ ಕೋಲಾರ ಉಪ ನೋಂದಣಿ ಕಛೇರಿಯಲ್ಲಿ ನೋಂದಣಿ ಸಂಖ್ಯೆ: KLR/1/05020/2019-20 ರಲ್ಲಿ ಶ್ರೀ ಅರ್ಜುನಪ್ಪ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಎ.ವಿನಯ್, ಶ್ರೀ ಎ.ಸಂದೀಪ್ ಕುಮಾರ್, ಸರಸಮ್ಮ ಮತ್ತು ಭಾಗ್ಯಮ್ಮ.ವಿ ಇವರುಗಳು ಶ್ರೀ ಜನಾರ್ಧನ್ ಎಂ ಮತ್ತು ನಾರಾಯಣ ಗೌಡ.ಎ ಇವರುಗಳಿಗೆ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ನೋಂದಾಯಿಸಿರುತ್ತಾರೆ. ಸದರಿ ಕ್ರಯದ ಕರಾರು ಪತ್ರ ನೋಂದಣಿಯಾದ ಸಮಯದಲ್ಲಿ ಹಾಜರುಪಡಿಸಿರುವ ಪಕ್ಷಕಾರರ ಆಧಾರ್ ಕಾರ್ಡ್‌ಗಳು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ವಿತರಣೆಯಾದ ಇ-ಖಾತೆ ಸಂಖ್ಯೆ: 151900701201021044ನ್ನು ಹಾಜರುಪಡಿಸಿದ್ದು, ಮಾರಾಟಗಾರರ ಹೆಸರಿನಲ್ಲಿ ಇ-ಖಾತೆ ಇರುವುದನ್ನು ಪರಿಶೀಲಿಸಿ ನೋಂದಣಿಯನ್ನು ಮಾಡಿರುತ್ತಾರೆ.<br><br>ಪ್ರಶ್ನಿತ ದಸ್ತಾವೇಜು ಸ್ವಾಧೀನ ರಹಿತ ಕ್ರಯದ ಕರಾರು ಪತ್ರವಾಗಿದ್ದು ಸದರಿ ದಸ್ತಾವೇಜಿನ ಮುಖಾಂತರ ಸ್ವತ್ತು ಹಸ್ತಾಂತರಗೊಂಡಿರುವುದಿಲ್ಲ.<br><br>ದಸ್ತಾವೇಜಿನ ನೋಂದಣಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳು ಆಗಿರುವುದು ಕಂಡು ಬಂದಿರುವುದಿಲ್ಲವೆಂದು ಜಿಲ್ಲಾ ನೋಂದಣಾಧಿಕಾರಿಗಳು, ಕೋಲಾರ ರವರು ತಿಳಿಸಿರುವುದಾಗಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ವರದಿ ಮಾಡಿರುತ್ತಾರೆ. |
| ಆ | ಬಂದಿದ್ದಲ್ಲಿ, ಇದರ ಪೂರ್ಣ ವಿವರಗಳನ್ನು ನೀಡುವುದು; | ವಿವಾದಿತ ಜಾಗವು ಮೂಲತಃ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕಿನ ದೊಡ್ಡಹಸಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೇಟೆಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 28/1ರ ಪೈಕಿ 15 ಗುಂಟೆ ಜಮೀನಾಗಿದ್ದು, ಲಭ್ಯವಿರುವ ದಾಖಲೆಗಳ ಪ್ರಕಾರ ಸದರಿ ಜಾಗವು ವೆಂಕಟರವಣಪ್ಪ ಬಿನ್ ಹನುಮಪ್ಪ ಎಂಬುವರಿಗೆ ಸೇರಿದ ಜಮೀನಾಗಿರುತ್ತದೆ. ಸದರಿ ಜಾಗವು ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರ ಆದೇಶ ಸಂಖ್ಯೆ: ALNSR:10:87-88 ದಿನಾಂಕ: 24.08.1987ರಲ್ಲಿ ಭೂ ಪರಿವರ್ತನೆಗೊಂಡಿರುತ್ತದೆ. |

| | | |
|---|---|---|
| | | ತದನಂತರ ಶ್ರೀ ವೆಂಕಟರವಣಪ್ಪ ಬಿನ್ ಹನುಮಪ್ಪರವರು ಮತ್ತು ಕುಟುಂಬಸ್ಥರು ಸದರಿ ಭೂ ಪರಿವರ್ತಿತ ಜಮೀನನ್ನು ಛತ್ರಕೋಡಿಹಳ್ಳಿ ಮಂಡಲ್ ಪಂಚಾಯಿತಿ ವಿ.ಪಿ.ಖಾತೆ ಸಂಖ್ಯೆ:361ರ ಡಿಮ್ಯಾಂಡ್ ರಿಜಿಸ್ಟರ್ ಖಾತೆಗೆ ಸೇರಿದ 15 ಗುಂಟೆ ಜಮೀನನ್ನು ಶ್ರೀ ಎಸ್.ಕೆ. ಪಟ್ಟಾಬಿರಾಮಯ್ಯಶೆಟ್ಟಿ ರವರಿಗೆ ನೊಂದಣಿ ಕ್ರಮಾಂಕ ಸಂಖ್ಯೆ.2626/87-88 ದಿನಾಂಕ: 26.02.1988 ರಂದು ಮಾರಾಟ ಮಾಡಿರುತ್ತಾರೆ.<br><br>ದೊಡ್ಡಹಸಾಳ ಗ್ರಾಮ ಪಂಚಾಯಿತಿಯಲ್ಲಿ ಜಂಜರು ನಂಬರ್ 460, ಆಸ್ತಿ ನಂಬರ್ 370 ರಂತೆ ಕರ ನಿರ್ಧರಣಾ ಪಟ್ಟಿಗೆ ಸೇರ್ಪಡೆ ಮಾಡಿರುವುದು ಕಂಡುಬಂದಿರುತ್ತದೆ. ಶ್ರೀ ಪಟ್ಟಾಬೀರಾಮಯ್ಯ ಶೆಟ್ಟಿರವರ ನಿಧನದ ನಂತರ ಪಾವತಿ ವಾರಸು ಆಧಾರದ ಮೇಲೆ ಖಾತೆಯನ್ನು ಶ್ರೀ ಕೆ.ಪಿ.ರಮೇಶ್ ಬಾಬು ಬಿನ್ ಲೇಟ್ ಶ್ರೀ ಪಟ್ಟಾಭೀರಾಮಯ್ಯ ಶೆಟ್ಟಿ ರವರಿಗೆ ಖಾತೆ ವರ್ಗಾವಣೆಯಾಗಿರುತ್ತದೆ.<br><br>ಸದರಿಯವರು ಇ-ಸ್ವತ್ತು ಸಂಖ್ಯೆ. 151900701201021253ರಂತೆ ದಿನಾಂಕ: 30.04.2019ರಂದು ಸದರಿ ಸ್ವತ್ತಿನ ಸಂಖ್ಯೆ. 460/370 ರಂತೆ ಒಟ್ಟು ವಿಸ್ತೀರ್ಣ 1523.70 ಚದರ ಮೀಟರ್ ಜಾಗ ಇ-ಸ್ವತ್ತು ಖಾತೆಯಾಗಿರುತ್ತದೆ. ತದನಂತರದಲ್ಲಿ ಸದರಿಯವರು ಇವರ ಪತ್ನಿಯಾದ ಶ್ರೀಮತಿ ಕೆ.ಆರ್.ದೇವಿಸುಲೋಚನಾ ಉರುಫ್ ಕೆ.ಆರ್.ಉಷಾ ರವರಿಗೆ ದಿನಾಂಕ: 22.06.2018 ರಂದು ದಾಸ್ತಾವೇಜು ಸಂಖ್ಯೆ.1619 ರಂತೆ ದಾನ ಪತ್ರದ ಮೂಲಕ ವರ್ಗಾವಣೆ ಮಾಡಿರುತ್ತಾರೆ. ದೊಡ್ಡಹಸಾಳ ಗ್ರಾಮ ಪಂಚಾಯಿತಿಯ ಕರ ನಿರ್ಧರಣಾ ಪಟ್ಟಿಯಲ್ಲಿ ಸದರಿಯವರ ಹೆಸರಿಗೆ ಬದಲಾವಣೆ ಮಾಡಿರುವುದು ಕಂಡುಬಂದಿರುತ್ತದೆ.<br><br>ದಿನಾಂಕ: 30.01.2023ರಂದು ಇ-ಸ್ವತ್ತು ಖಾತೆ ಸಹ ಆಗಿರುತ್ತದೆ. ಆದರೆ ವಿವಾದಿತ ಜಾಗಕ್ಕೆ ಸಂಬಂಧಿಸಿದಂತೆ ದೊಡ್ಡಹಸಾಳ ಗ್ರಾಮ ಪಂಚಾಯಿತಿಯಲ್ಲಿ ಮೂಲ ಜಮೀನಿನ ವಾರಸುದಾರರಾದ ಶ್ರೀ ವೆಂಕಟರವಣಪ್ಪ ಬಿನ್ ಹನುಮಪ್ಪ ಎಂಬುವರ ಹೆಸರಿಗೆ ಕೋಲಾರ ತಾಲ್ಲೂಕು, ಕಸಬಾ ಹೋಬಳಿ ಪೇಟೆಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 28/1ರ ಪೈಕಿ 15 ಗುಂಟೆ ವಿಸ್ತೀರ್ಣವನ್ನು ವ್ಯವಸಾಯೇತರ ಉದ್ದೇಶಕ್ಕೆ ಅರ್ಜಿ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳ ಆದೇಶ: ALN:SR:23/87-88 ರಂತೆ ದಿನಾಂಕ: 24.08.1987 ರಂದು ಭೂ ಪರಿವರ್ತನೆಯಾಗಿರುತ್ತದೆ ಎಂದು ನಮೂದಿಸಿ ಆಸ್ತಿ ಸಂಖ್ಯೆ:2836 ರಂತೆ ಕರ ನಿರ್ಧರಣಾ ಪಟ್ಟಿಯಲ್ಲಿ ನಮೂದಿಸಿರುವುದು ಕಂಡುಬಂದಿರುತ್ತದೆ. ಆದರೆ ಈ ಕ್ರಮವು ಕಾನೂನು ಬಾಹಿರವಾಗಿರುತ್ತದೆ. ಆದಾಗ್ಯೂ ಸದರಿ ಕರ ನಿರ್ಧರಣಾ ಪಟ್ಟಿಯಲ್ಲಿ ಶ್ರೀ ವೆಂಕರವಣಪ್ಪ ಬಿನ್ ಹನುಮಪ್ಪ ರವರ ನಿಧನ ನಂತರ ಸದರಿಯವರ ಮಗನಾದ ಶ್ರೀ ಅರ್ಜುನಪ್ಪ ರವರ ಹೆಸರಿಗೆ ಪಾವತಿ ಖಾತೆ ಆಧಾರದ ಮೇಲೆ ಬದಲಾವಣೆ ಮಾಡಿರುವುದು ಕಂಡುಬಂದಿರುತ್ತದೆ. |

| | | |
|---|---|---|
| | | ಅದರಂತೆ ಸದರಿಯವರು ಸ್ವತ್ತಿನ ಸಂಖ್ಯೆ. 151900701201021044, ಸ್ವತ್ತಿನ ಸಂಖ್ಯೆ. 2091/ 848 ಒಟ್ಟು ವಿಸ್ತೀರ್ಣ.290.60, ಚದರಮೀಟರ್ ಜಾಗವನ್ನು ಇ-ಸ್ವತ್ತು ಖಾತೆ ದಿನಾಂಕ:22.02.2018 ಮಾಡಲಾಗಿರುತ್ತದೆ. ತದನಂತರ ಸದರಿ ಸ್ವತ್ತಿನ ಒಟ್ಟು ವಿಸ್ತೀರ್ಣವನ್ನು 256.87 ಚದರ ಮೀಟರ್‌ಗಳಿಗೆ ಬದಲಾವಣೆ ಮಾಡಿ ದಿನಾಂಕ: 13.03.2018 ರಂದು ದೊಡ್ಡಹಸಾಳ ಗ್ರಾಮ ಪಂಚಾಯಿತಿಯಲ್ಲಿ ಇ-ಸ್ವತ್ತು ಖಾತೆಯಾಗಿರುತ್ತದೆ. ಆದರೆ ಸದರಿ ಇ-ಖಾತೆ ವಿಚಾರವನ್ನು ಮರೆಮಾಚಿ ಶ್ರೀ ಅರ್ಜುನಪ್ಪ ಬಿನ್ ವೆಂಕಟರವಣಪ್ಪ ರವರು ಹಾಗೂ ಕುಟುಂಬಸ್ಥರು ಶ್ರೀ ವೆಂಕಟರವಣಪ್ಪ ಬಿನ್ ಹನುಮಪ್ಪರವರು ಈಗಾಗಲೇ ಶ್ರೀ ಪಟ್ಟಾಬೀರಾಮಯ್ಯಶೆಟ್ಟಿ ರವರಿಗೆ ಜಮೀನನ್ನು ಮಾರಾಟ ಮಾಡಿದ್ದರೂ ಸಹ ಇದನ್ನು ಮರೆಮಾಚಿ ಅಕ್ರಮವಾಗಿ ಹಾಗೂ ಕಾನೂನು ಬಾಹಿರವಾಗಿ ಕೋಲಾರ ತಾಲ್ಲೂಕು, ಕಸಬಾ ಹೋಬಳಿ ಪೇಟೆಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 28/1 ರ ಪೈಕಿ 15 ಗುಂಟೆ ಜಮೀನನ್ನು ಶ್ರೀ ಜನಾರ್ಧನ್ ಎಂ. ಮತ್ತು ನಾರಾಯಣಗೌಡ ಎ ರವರಿಗೆ ಕ್ರಯದ ಕರಾರನ್ನು ದಾಸ್ತಾವೇಜು ಸಂಖ್ಯೆ.5020 ದಿನಾಂಕ:24.10.2019 ರಂದು ಕ್ರಯ ಮಾಡಿರುವುದು ಕಂಡುಬಂದಿರುತ್ತದೆ. |
| ಇ | ಅಕ್ರಮದಲ್ಲಿ ಭಾಗಿಯಾದ ಭೂಗಳ್ಳರ ಹಾಗೂ ಅಧಿಕಾರಿ/ ನೌಕರರ ಪೂರ್ಣ ವಿವರಗಳನ್ನು ಒದಗಿಸುವುದು; | ಶ್ರೀ ಅರ್ಜುನಪ್ಪ ಬಿನ್ ವೆಂಕಟರವಣಪ್ಪ, ಜಮೀನಿನ ಮಾಲೀಕರು, ಶ್ರೀ ನಾರಾಯಣಸ್ವಾಮಿ ವಿ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಗೂ ಹಿರಿಯ ಉಪ ನೋಂದಣಾಧಿಕಾರಿಗಳು, ಕೋಲಾರ ಇವರುಗಳು ಸದರಿ ಅಕ್ರಮದಲ್ಲಿ ಭಾಗಿಯಾಗಿರುತ್ತಾರೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವರದಿ ಮಾಡಿರುತ್ತದೆ. |
| ಈ | ಅಕ್ರಮದಾರರ ವಿರುದ್ಧ ಇದುವರೆವಿಗೂ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | 1. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ನಿಯಮ 269 ರನ್ವಯ ಕಾರ್ಯನಿರ್ವಾಹಕ ಅಧಿಕಾರಿಯವರು ಸ್ವಯಂ ಪ್ರೇರಿತ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ಹಂತದಲ್ಲಿರುತ್ತದೆ.<br>2. ಈ ಅಕ್ರಮ ಖಾತೆ ಮಾಡುವಲ್ಲಿ ಬಾಗೀಯಾಗಿರುವ ಸಂಬಂಧಪಟ್ಟ ಅಧಿಕಾರಿ/ ನೌಕರರ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವ ಸಂಬಂಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿರುತ್ತದೆ.<br>3. ಈ ಅಕ್ರಮ ಖಾತೆ ಮಾಡಿಸಿಕೊಂಡು ಕಾನೂನು ಬಾಹಿರವಾಗಿ ಕ್ರಯದ ಕರಾರು ಮೂಲಕ ಪರಬಾರೆ ಮಾಡಿರುವ ಶ್ರೀ ಅರ್ಜುನಪ್ಪ ಬಿನ್ ವೆಂಕಟರವಣಪ್ಪ ಮತ್ತು ಇವರ ಕುಟುಂಬಸ್ಥರ ವಿರುದ್ಧ ಕಾನೂನು ರೀತ್ಯ ಕ್ರಿಮಿನಲ್ ಮೊಕದ್ದಮೆ ಪ್ರಕರಣ ದಾಖಲಿಸಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕೋಲಾರ ರವರು ಕ್ರಮವಹಿಸಿರುತ್ತಾರೆ. |

| | | |
|---|---|---|
| ಉ | ಯಾವ ಕಾಲಮಿತಿಯಲ್ಲಿ ಅಕ್ರಮ ಭೂ ಕಬಳಿಕೆಯನ್ನು ತೆರವುಗೊಳಿಸಿ, ವಂಚನೆಗೊಳಗಾದವರಿಗೆ ನ್ಯಾಯ ಒದಗಿಸಲಾಗುವುದು? | ಸದರಿ ಪ್ರಕರಣವು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ವಿಚಾರಣಾ ಹಂತದಲ್ಲಿರುವುದರಿಂದ ಸದರಿ ಪ್ರಕರಣವು ವಿಳಂಬಕ್ಕೆ ಅಸ್ಪದ ನೀಡದೇ ಕೂಡಲೇ ಇತ್ಯರ್ಥಪಡಿಸಿ ಅಕ್ರಮ ಭೂ ಕಬಳಿಕೆಯನ್ನು ತೆರವುಗೊಳಿಸಿ ವಂಚನೆಗೆ ಒಳಾಗದವರಿಗೆ ನ್ಯಾಯ ಒದಗಿಸಲು ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುವುದೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ತಿಳಿಸಿರುತ್ತದೆ. |

ಕಂಇ/16/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು